ಹೇಗೋ ನಡೆದುಕೊಂಡು ಬಂದ ಬದುಕಿಗೆ ಈಗ ಪರಕೀಯ ಭಾವ ಕಾಡಿತ್ತು. ಮನೆಯವರಿಗೂ ಅಷ್ಟೇ. ಇಷ್ಟು ದಿನ ಬೇಕಾಬಿಟ್ಟಿಯಾಗಿದ್ದವರು ಈಗ ಒಮ್ಮೆಲೆ ಅಂಕೆಗೆ ಒಳಪಟ್ಟಂತಾಗಿತ್ತು. ಕೋಣೆಯಲ್ಲೆಲ್ಲ ಗಾಂಧೀಜಿಯ ಪಟಗಳು ರಾರಾಜಿಸಿದವು. ನಿತ್ಯ ಗಾಂಧಿ ಸಂಘಕ್ಕೆ ಭೇಟಿ ಕೊಡುತ್ತ ಸದಸ್ಯನಾಗಿದ್ದವ ಕಾರ್ಯದರ್ಶಿಯಾದ. ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಂಡು ಮುಂದಾಳತ್ವ ವಹಿಸಿದ. ಆರ್ಥಿಕವಾಗಿ ದುರ್ಬಲವಾದ ಹುಡುಗಿಯರಿಗಾಗಿ ಒಂದು ಹಾಸ್ಟೆಲ್ ತೆರೆಯಲಾಯಿತು. ಸಂಘ ಅವರ ಓದಿನ ಹೊಣೆಯನ್ನೂ ಹೊತ್ತುಕೊಂಡಿತು. ವೃದ್ಧರಾಗಿದ್ದ ಕೇಶವರೆಡ್ಡಿಗಳೂ ಅಪಾರ ವಂತಿಗೆ ನೀಡಿ ಅಳಿಯನ ಕೆಲಸಕ್ಕೆ ಮೆಚ್ಚುಗೆ ಸೂಚಿಸಿದ್ದರು. ತಿಪಟೂರಿನಲ್ಲಿ ಭಜನೆಗೆ ಬಂದು ತನಗೆ ನೆರವಾಗುತ್ತಿದ್ದ ಬಡವರ ಹುಡುಗಿ ವಂದನಾಳನ್ನು ಕರೆತಂದು ಹಾಸ್ಟೆಲ್‌ಗೆ ಸೇರಿಸಿದ ಸತ್ಯಪ್ಪ. ಪಾಲಕರಿಲ್ಲದವಳನ್ನು ಕಷ್ಟದಿಂದ ಸಾಕಿಕೊಂಡಿದ್ದ ಬಂಧುಗಳು ಸಂತೋಷದಿಂದಲೇ ಕಳಿಸಿಕೊಟ್ಟಿದ್ದರು. ಇಲ್ಲಿಯೇ ಅವಳ ಸೌಂದರ್ಯ ಅರಳಿತ್ತು. ನಿಷ್ಠೆಯ ಓದು ಕಾಲೇಜಿನ ಮೆಟ್ಟಿಲು ಹತ್ತಿಸಿತ್ತು. ಸತ್ಯಪ್ಪ ಎಲ್ಲೆಡೆ ಓಡಾಡುತ್ತ ಗಮನಿಸುತ್ತಿದ್ದ. ಎಲ್ಲ ಚೆನ್ನಾಗಿಯೇ ನಡೆದಿತ್ತು. ಆ ಘಟನೆ ನಡೆಯುವವರೆಗೆ...

ಕೆಲಸದ ಪ್ರಯುಕ್ತ ನಾಲ್ಕು ದಿನಗಳವರೆಗೆ ಊರಿಗೆ ಹೋಗಿದ್ದವ ಹಿಂದಿರುಗಿದಾಗ ವಂದನಾ ಕಂದಿದ ಮುಖ ಹೊತ್ತು ಎದುರಿಗೆ ಬಂದು ನಿಂತಳು. "ಏನಾಯಿತಮ್ಮಾ?" ಎಂದಾಗ ಅಳುಕದೇ, "ಅಂಕಲ್, ನಿನ್ನೆ ರಾತ್ರಿ ನಿಮ್ಮ ಭಾಮೈದ ಬಾಲಕೃಷ್ಣ ನನ್ನ ಮೇಲೆ ಅತ್ಯಾಚಾರ ಮಾಡಿದರು. ಕೂಗಿದರೂ ಯಾರೂ ಬರಲಿಲ್ಲ. ಬಾಯಿಬಿಟ್ಟರೆ ಕೊಂದುಬಿಡುತ್ತೇನೆ ಎಂದು ಹೆದರಿಸಿದರು. ಹಿಂದೆಯೂ ಕೆಲವು ಹುಡುಗಿಯರಿಗೆ ಆಗಿದೆ. ಭಯದಿಂದ ಸುಮ್ಮನಿದ್ದಾರೆ" ಎಂದಳು. ಬೆಕ್ಕಸ ಬೆರಗಾದ ಸತ್ಯಪ್ಪ ಕೋಪದಿಂದ ಕ್ರುದ್ಧನಾದ. ತಕ್ಷಣವೇ ವಿಚಾರಿಸಿದ. ಅವನ ಬಲಗೈ ಬಂಟರಾಗಿದ್ದ ಮಾದೇಶ ಮತ್ತು ವಾಚ್‌ಮನ್ ನಡೆದ ಸಂಗತಿಯನ್ನು ದೃಢೀಕರಿಸಿದರು. ಸಾಕ್ಷ್ಯಗಳನ್ನೂ ತೋರಿಸಿದರು. ಮ್ಯಾನೇಜರ್ ಮೂರ್ತಿ, "ಸಾಧ್ಯವೇ ಇಲ್ಲ" ಎಂದು ಕೂಗಾಡುತ್ತ ವಂದನಾಳನ್ನು ಗುರಾಯಿಸಿದ. ಮುಖ್ಯಸ್ಥರಾದ ತಿಮ್ಮಣ್ಣನವರೂ ಬಂದು ಸೇರಿಕೊಂಡರು. ಮೂರ್ತಿಯನ್ನು ತಕ್ಷಣವೇ ವಜಾ ಮಾಡಿ, ಅಪ್ಪಟ ಗಾಂಧೀವಾದಿಯಾಗಿದ್ದ ಪಂಚಾಲಯ್ಯನನ್ನು ನೇಮಿಸಲಾಯಿತು. ಆದರೂ ಅವನಿಗೆ ಸಮಾಧಾನವಾಗಲಿಲ್ಲ. 'ವಂದನಾ.. ಅವಳಂಥ ಅನೇಕ ಹೂವುಗಳ ಶೀಲಕ್ಕೆ ಬೆಲೆಯಿಲ್ಲವೆ? ಬಾಲಕೃಷ್ಣನಿಗೆ ಇದು ಆಟದ ಮೈದಾನವಾಯಿತೆ?' ಎಂದು ನೊಂದ. ನೆನಪುಗಳು ಅವನನ್ನು ಆರ್ದ್ರವಾಗಿಸಿದವು.

ದೆಹಲಿಯಲ್ಲಿನ ಸಂಘದ ಮುಖ್ಯಸ್ಥರಿಗೆ ವಿಷಯ ತಿಳಿಸಬೇಕೆಂದು ನಿರ್ಧರಿಸಿದ. ಆಗಲೇ ಮನೆಯಲ್ಲಿ ದೊಡ್ಡ ಹಗರಣವಾಗಿದ್ದು. ಪತ್ನಿ, ಮಕ್ಕಳು ಬಾಲಕೃಷ್ಣನ ಪರವಾಗಿ ನಿಂತು ಆರ್ಭಟಿಸಿದ್ದರು. ಕೋಲೂರಿಕೊಂಡು ನಡಗುತ್ತ ಬಂದ ಕೇಶವರೆಡ್ಡಿ ಅವನ ಕೈ ಹಿಡಿದುಕೊಂಡು, "ನನ್ನ ಮಗ ಏನೋ ತಪ್ಪು ಮಾಡಿಬಿಟ್ಟಿದ್ದಾನೆ ಅಳಿಯಂದ್ರೇ. ಅವನನ್ನ ಬಿಟ್ಟುಕೊಡಬೇಡಿ. ಇಷ್ಟು ವರ್ಷಗಳವರೆಗೆ ನಿಮ್ಮ ಸಂಸಾರಾನ ಸಾಕಿ ಸಲಹಿದೀನಿ. ಇದೊಂದು ಬಾರಿ ಸುಳ್ಳು ಹೇಳಿದರೆ ನಿಮ್ಮ ಗಾಂಧೀಜಿ ನಿಮ್ಮನ್ನ ಕ್ಷಮಿಸ್ತಾರೆ" ಎಂದು ಕಣ್ತುಂಬಿಕೊಂಡಿದ್ದ. ಸತ್ಯಪ್ಪನಲ್ಲಿ ವಿಚಾರಗಳ ತಾಕಲಾಟ ಘರ್ಷಣೆ ನಡೆಯುತ್ತಿತ್ತು. ಅವನ ಸತ್ಯವ್ರತವನ್ನು ಎಲ್ಲರೂ ಬಲ್ಲವರೆ. ಅವನ ಮಾತಿಗೆ, ಹೋರಾಟಕ್ಕೆ ಬಹಳಷ್ಟು ಬೆಲೆಯಿತ್ತು. ಅದಿಲ್ಲವಾದರೆ ಹೇಗೋ ಪ್ರಕರಣವನ್ನೇ ಮುಚ್ಚಿಹಾಕುತ್ತಾರೆ. ಜೀವನವಿಡೀ ನಡೆದು ಬಂದ ದಾರಿಯ ಬಗ್ಗೆ ಪ್ರಶ್ನೆಗಳು ಕಾಡಿದ್ದವು. 'ಸತ್ಯ... ಗಾಂಧೀವಾದದಂಥ ಮೌಲ್ಯಗಳು ಕೇವಲ ಹೇಳಲು... ಬರೆಯಲು ಮಾತ್ರ ಇರುವವೆ? ಆಚರಿಸಲಲ್ಲವೆ? ಆ ದಾರಿಯಲ್ಲಿ ನಡೆದ ಗಾಂಧಿ ಮಹಾತ್ಮರಾದರು. ತನಗೆ ಹಿಂದೆಮುಂದೆಲ್ಲ ಬರೀ ಕುಹಕ, ವ್ಯಂಗ್ಯಗಳೇ ಕಾಣುತ್ತವೆ. ಸತ್ಯವ್ರತವನ್ನು ಅನುಸರಿಸುವುದು ತಪ್ಪೆ?' ಎಂಬೆಲ್ಲ ಯೋಚನೆಗಳ ಮಧ್ಯೆಯೂ ಅವನ ನಿರ್ಧಾರ ಅಚಲವಾಗಿತ್ತು. ಹಿಂದೆಯೇ ವಂದನಾಳ ಮುಖ ಇಣುಕುತ್ತಿತ್ತು. ಜೀವ ತೆಗೆಯಲೂ ಹೇಸದ ಜನ. ಸುಂದರವಾಗಿ ಅರಳಿದ ಹೂವು ಮಸಣದ

